# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 720 (1075)

ಸದಸ್ಯರ ಹೆಸರು : ಶ್ರೀ ಎ. ವಸಂತ ಕುಮಾರ್, (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ಸಚಿವರು : ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

ಉತ್ತರಿಸಬೇಕಾದ ದಿನಾಂಕ : 21.08.2026

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಯಚೂರು ಜಿಲ್ಲೆಯ ರೈತರಿಗೆ ಗುಣಮಟ್ಟದ ಹಣ್ಣು ಮತ್ತು ತೋಟಗಾರಿಕೆ ಸಸಿಗಳು ಸಮಯಕ್ಕೆ ದೊರೆಯುವಂತೆ ತಾಲ್ಲೂಕು ಮಟ್ಟದಲ್ಲಿ Horticulture Nursery / ಸಸಿ ಬ್ಯಾಂಕ್‌ಗಳನ್ನು ಸ್ಥಾಪಿಸುವ ಯೋಜನೆ ಇದೆಯೇ; | ಹೌದು,<br>1. ರಾಯಚೂರು ಜಿಲ್ಲೆಯ ರೈತರಿಗೆ ಗುಣಮಟ್ಟದ ಹಣ್ಣು ಮತ್ತು ತೋಟಗಾರಿಕೆ ಸಸಿಗಳು ಸಮಯಕ್ಕೆ ದೊರೆಯುವಂತೆ ಇಲಾಖೆಯ ಅಧೀನ 4 ಸಸ್ಯಾಗಾರ ಮತ್ತು 9 ತೋಟಗಾರಿಕೆ ಕ್ಷೇತ್ರಗಳಿದ್ದು, ಸಸಿ/ ಕಸಿ ಗಿಡಗಳನ್ನು ಉತ್ಪಾದಿಸಿ ಯೋಗ್ಯ ದರದಲ್ಲಿ ರೈತರಿಗೆ ನೀಡಲಾಗುತ್ತಿದೆ.<br>2. ರಾಯಚೂರು ಕೃಷಿ ವಿಶ್ವವಿದ್ಯಾಲಯ ತೋಟಗಾರಿಕೆ ಸಸ್ಯಾಗಾರದಲ್ಲಿ ಸಸಿ/ ಕಸಿಗಳನ್ನು ಉತ್ಪಾದಿಸಿ ನೀಡಲಾಗುತ್ತಿದೆ.<br>3. ಸಮಗ್ರ ತೋಟಗಾರಿಕೆ ಅಭಿವೃದ್ಧಿ ಮಿಷನ್ (MIDH) ಯೋಜನೆಯಡಿ ಸಣ್ಣ ಮತ್ತು ಬೃಹತ್ ಸಸ್ಯಾಗಾರಗಳನ್ನು ಸ್ಥಾಪಿಸಲು ರೈತರಿಗೆ ಸಹಾಯಧನ ಈ ಕೆಳಕಂಡಂತೆ ನೀಡಲಾಗುತ್ತಿದೆ:-<br>i) ಬೃಹತ್ ಸಸ್ಯಾಗಾರ (ಗರಿಷ್ಠ 2 ಹೆ.) ಸ್ಥಾಪಿಸಲು ಘಟಕ ವೆಚ್ಚ ರೂ. 60 ಲಕ್ಷಗಳಲ್ಲಿ 40% ರಂತೆ ರೂ. 24 ಲಕ್ಷ ಸಹಾಯಧನ ನೀಡಲಾಗುವುದು.<br>ii) ಸಣ್ಣ ಸಸ್ಯಾಗಾರ (ಗರಿಷ್ಠ 1 ಹೆ.) ಸ್ಥಾಪಿಸಲು ಘಟಕ ವೆಚ್ಚ ರೂ. 20 ಲಕ್ಷಗಳಲ್ಲಿ 50% ರಂತೆ ರೂ. 10 ಲಕ್ಷ ಸಹಾಯಧನ ನೀಡಲಾಗುವುದು. |
| ಆ) | ಪ್ರತಿ ತಾಲ್ಲೂಕಿನಲ್ಲಿ ರೈತರ ಬೇಡಿಕೆಗೆ ಹೋಲಿಸಿದರೆ ಪ್ರಸ್ತುತ ಯಾವ ಯಾವ ಸಸಿಗಳ ಕೊರತೆ ಇದೆ; | ರಾಯಚೂರು ಜಿಲ್ಲೆಯಲ್ಲಿ ದಾಳಿಂಬೆ, ಪಪ್ಪಾಯ, ಪೇರಲ, ಮಾವು ಕಸಿಗಳ ಕೊರತೆ ಕಂಡು ಬಂದಿದೆ. |
| ಇ) | ಸಸಿ ನಡೆದ ರೈತರ ಜಮೀನಿನಲ್ಲಿ ಸಸಿಗಳ ಬದುಕುಳಿಯುವಿಕೆ ಮತ್ತು ಉತ್ಪಾದಕತೆಯನ್ನು 2-3 ವರ್ಷಗಳ ಕಾಲ ಪರಿಶೀಲಿಸುವ | ಹೌದು, ರೈತರ ಜಮೀನಿನಲ್ಲಿ ಇಲಾಖೆ ಯೋಜನೆಗಳಡಿ ಒದಗಿಸಲಾದ ಸಸಿಗಳ ಬದುಕುಳಿಯುವಿಕೆ ಮತ್ತು ಉತ್ಪಾದಕತೆಯನ್ನು ಪರಿಶೀಲಿಸುವ ವ್ಯವಸ್ಥೆ ಈ ಕೆಳಂಡಂತಿರುತ್ತದೆ:- |

| | | |
|---|---|---|
| | ವ್ಯವಸ್ಥೆ ಮಾಡಲಾಗುವುದೇ? | 1. ಸಮಗ್ರ ತೋಟಗಾರಿಕೆ ಅಭಿವೃದ್ಧಿ ಮಿಷನ್ (MIDH) ಯೋಜನೆಯಡಿ ಹೊಸ ಪ್ರದೇಶ ವಿಸ್ತರಣೆ ಕೈಗೊಳ್ಳುವ ರೈತರಿಗೆ ಸಹಾಯಧನ ನೀಡಿ ಎರಡನೇ ವರ್ಷದ ನಿರ್ವಹಣೆಗೆ ಸಸಿಗಳ ಬದುಕುಳಿಯುವಿಕೆಯನ್ನು ಪರಿಶೀಲಿಸಿದ ನಂತರ ಮಾತ್ರ ಸಹಾಯಧನ ನೀಡಲಾಗುತ್ತಿದೆ.<br><br>2. ತಾಳೆ ಬೆಳೆ ಯೋಜನೆಯಡಿ ಹೊಸ ಪ್ರದೇಶ ವಿಸ್ತರಣೆ ಕೈಗೊಂಡ ರೈತರಿಗೆ ಮೊದಲ ನಾಲ್ಕು ವರ್ಷಗಳಲ್ಲಿ ಪ್ರತೀ ವರ್ಷ ಸಸಿಗಳ ಬದುಕುಳಿಯುವಿಕೆಯನ್ನು ಪರಿಶೀಲಿಸಿದ ನಂತರವೇ ಸಹಾಯಧನ ನೀಡಲಾಗುವುದು.<br><br>3. ತೆಂಗು ಅಭಿವೃದ್ಧಿ ಮಂಡಳಿ ವತಿಯಿಂದ ತೆಂಗು ಪ್ರದೇಶ ವಿಸ್ತರಣೆ ಕೈಗೊಂಡ ರೈತರಿಗೆ ಎರಡನೇ ವರ್ಷದ ನಿರ್ವಹಣೆಗಾಗಿ ಸಸಿಗಳ ಬದುಕುಳಿಯುವಿಕೆಯನ್ನು ಪರಿಶೀಲಿಸಿದ ನಂತರವೇ ಸಹಾಯಧನ ನೀಡಲಾಗುವುದು. |

ಸಂಖ್ಯೆ: HORTI 445 HGM 2026

(ಎಸ್. ಎಸ್. ಮಲ್ಲಿಕಾರ್ಜುನ್)
ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು